# ಫೆ.1ರಿಂದ ಎರಡು ದಿನಗಳ ಅಭಿವೃದ್ಧಿ ಸಂವಾದ



ಹುಬ್ಬಳ್ಳಿ: ದೇಶಪಾಂಡೆ ಫೌಂಡೇಶನ್ ವತಿಯಿಂದ ನಗರದಲ್ಲಿ ಫೆ.1 ಮತ್ತು 2 ರಂದು 'ಡೆವಲಪ್‌ಮೆಂಟ್ ಡೈಲಾಗ್–2020' ಹಾಗೂ 'ಸ್ಟಾರ್ಟ್ ಅಪ್ ಡೈಲಾಗ್–2020' ಸಮ್ಮೇಳನ ಆಯೋಜಿಸಲಾಗಿದೆ ಎಂದು ಫೌಂಡೇಶನ್ ಸಂಸ್ಥಾಪಕ ಡಾ.ಗುರುರಾಜ ದೇಶ್ ದೇಶಪಾಂಡೆ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವರ್ಷದ ಸಮ್ಮೇಳನದ ಆಶಯವಾಗಿರುವ 'ಯೋಜಿತ ಉದ್ದೇಶ, ನಾವೀನ್ಯತೆ ಮತ್ತು ಪರಿಣಾಮ' ಎಂಬ ಪರಿಕಲ್ಪನೆಯೊಂದಿಗೆ ಡೆವಲಪ್‌ಮೆಂಟ್ ಡೈಲಾಗ್–2020' ಆರಂಭವಾಗಲಿದೆ. ಸಾಮಾಜಿಕ ಪ್ರಭಾವದ ಮೌಲ್ಯಮಾಪನದಲ್ಲಿ ಸಾಧನೆ, ಸಾರ್ವಜನಿಕ, ಖಾಸಗಿ, ದಾನೋನಾತ್ಮಕ ಉದ್ದೇಶ ಒಳಗೊಂಡಂತೆ ಸಾಮಾನ್ಯ ಸಮಸ್ಯೆಗಳನ್ನು ಪರಿಹರಿಸುವುದು ಈ ಸಮ್ಮೇಳನಗಳ ಉದ್ದೇಶವಾಗಿದೆ ಎಂದರು.

ಎರಡು ದಿನಗಳ ಕಾರ್ಯಕ್ರಮದಲ್ಲಿ ತಜ್ಞರು, ಸುಧಾರಕರು, ನೀತಿ ರೂಪಕರು ಭಾಗವಹಿಸಿ ಅಮೂಲ್ಯ ಸಲಹೆ ನೀಡಲಿದ್ದಾರೆ ಎಂದು ತಿಳಿಸಿದರು.

ಫೆ.1ರಂದು ದಿಕ್ಸೂಚಿ ಭಾಷಣದ ಮೂಲಕ ಸಮ್ಮೇಳನ ಆರಂಭಗೊಳ್ಳಲಿದ್ದು ಕೃಷಿಯ ಸಾಮರ್ಥ್ಯ, ಕೌಶಲ್ಯ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಬಗ್ಗೆ ತಜ್ಞರು ಚರ್ಚಿಸಲಿದ್ದಾರೆ. ಗೋಕುಲ ರಸ್ತೆಯ ದೇಶಪಾಂಡೆ ಸ್ಕಿಲ್ಲಿಂಗ್ ಆವರಣದಿಂದ 'ಯುವ ಸಮಿತಿ' ತಂಡದ ಕಾರ್ಯಕ್ರಮ ಸಮಾನಾಂತರವಾಗಿ ನಡೆಯಲಿದೆ. ಅದೇ ದಿನ ಸಂಜೆ ಇನ್ನೋವೇಷನ್ ಸಭಾಂಗಣದಲ್ಲಿ 'ಇವನಿಂಗ್ ವಿತ್ ಲೆಜೆಂಡ್' ಕಾರ್ಯಕ್ರಮದ ಮೂಲಕ ಮುಕ್ತಾಯಗೊಳ್ಳಲಿದೆ. ಈ ಕಾರ್ಯಕ್ರಮದಲ್ಲಿ ಏರಿಯನ್ ಕೆಪಿಟಲ್‌ನ ಸಂಸ್ಥಾಪಕ ಮೋಹನದಾಸ ಪೈ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಫೆ.2ರಂದು 'ಸ್ಟಾರ್ಟ್‌ಅಪ್ ಡೈಲಾಗ್–2020' ಕಾರ್ಯಕ್ರಮ ಗೋಕುಲ ರಸ್ತೆಯ ದೇಶಪಾಂಡೆ ಸ್ಟಾರ್ಟ್ ಅಪ್ ಕ್ಯಾಂಪಸ್‌ನಲ್ಲಿ ನಡೆಯಲಿದೆ. ಉದ್ಯಮದಲ್ಲಿ ಹೊಸ ಆವಿಷ್ಕಾರದ ಕುರಿತು ಮಾಹಿತಿ ನೀಡಲಾಗುತ್ತದೆ ಎಂದು ಗುರುರಾಜ ದೇಶಪಾಂಡೆ ತಿಳಿಸಿದರು.

ಫೌಂಡೇಶನ್‌ನ ಸಹ ಸಂಸ್ಥಾಪಕಿ ಡಾ.ಜಯಶ್ರೀ ದೇಶಪಾಂಡೆ, ದೇಶಪಾಂಡೆ ಫೌಂಡೇಶನ್ ಸಿಇಒ ವಿವೇಕ ಪವಾರ, ದೇಶಪಾಂಡೆ ಸ್ಟಾರ್ಟ್‌ಅಪ್‌ನ ಸಿಇಒ ಸಿ.ಎಂ. ಪಾಟೀಲ, ದೇಶಪಾಂಡೆ ಸ್ಕಿಲ್ಲಿಂಗ್‌ನ ಸಿಇಒ ಪಿ.ಎನ್. ನಾಯಕ, ಮುಖ್ಯವತಿ ಗೌಳಿ ಇದ್ದರು.

## 2ರಂದು ಉಪರಾಷ್ಟ್ರಪತಿಯಿಂದ ಸ್ಕಿಲ್ಲಿಂಗ್ ಸೆಂಟರ್ ಉದ್ಘಾಟನೆ



ಹುಬ್ಬಳ್ಳಿ: ನಗರದ ಗೋಕುಲ ರಸ್ತೆಯಲ್ಲಿರುವ ದೇಶಪಾಂಡೆ ಫೌಂಡೇಶನ್ ಆವರಣದಲ್ಲಿ ಆರಂಭವಾಗಿರುವ ದೇಶಪಾಂಡೆ ಸ್ಕಿಲ್ಲಿಂಗ್ ಸೆಂಟರ್ ಅನ್ನು ಫೆ.2ರಂದು ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಉದ್ಘಾಟಿಸಲಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಡಾ.ಗುರುರಾಜ ದೇಶ ದೇಶಪಾಂಡೆ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಆರಂಭವಾಗಿರುವ ಸ್ಕಿಲ್ಲಿಂಗ್ ಸೆಂಟರ್‌ನಲ್ಲಿ ನಾಲ್ಕು ಮತ್ತು ಐದು ತಿಂಗಳ ಎರಡು ತರಬೇತಿ ಶಿಬಿರಗಳು ಕೇಂದ್ರದಲ್ಲಿ ನಡೆಯುತ್ತಿವೆ. 800 ಯುವಕರು ಹಾಗೂ 600 ಯುವತಿಯರು ಸೇರಿ 1400 ಜನರಿಗೆ ವಸತಿ ವ್ಯವಸ್ಥೆಯೊಂದಿಗೆ ತರಬೇತಿ ನೀಡಲಾಗುತ್ತಿದೆ. ಇದರಲ್ಲಿ ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ತರಬೇತಿ ಪಡೆದಿದ್ದಾರೆ ಎಂದು ತಿಳಿಸಿದರು.

ಈಗಾಗಲೇ 1500 ಯುವಜನತೆ ತರಬೇತಿ ಪಡೆದಿದ್ದಾರೆ. ಇವರಲ್ಲಿ ಶೇ.90 ರಷ್ಟು ಜನರಿಗೆ ಪ್ಲೇಸ್‌ಮೆಂಟ್ ಆಗಿದೆ. ಉಳಿದ 10ರಷ್ಟು ಜನ ಮದುವೆ, ಮುಂದುವರಿದ ಕಲಿಕೆ ಮೊದಲಾದ ಕಾರಣದಿಂದ ಉದ್ಯೋಗ ಪಡೆದಿಲ್ಲ ಎಂದು ತಿಳಿಸಿದರು.

ಈಗಾಗಲೇ 90ಕ್ಕೂ ಹೆಚ್ಚು ಕಂಪನಿಗಳು ಉದ್ಯೋಗಾವಕಾಶ ನೀಡಲು ಮುಂದೆ ಬಂದಿದ್ದು ಕ್ಯಾಂಪಸ್ ಸಂದರ್ಶನ ನಡೆಸಿ ಆಯ್ಕೆ ಮಾಡಿಕೊಂಡಿದ್ದಾರೆ ಎಂದು ತಿಳಿಸಿದರು.